ಎಂ.ವಿ.ಸಿ.858/2023
ಪಿ .ಡಬ್ಲ್ಯೂ : 1

ದಿನಾಂಕ 08-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರವಾಗಿ ಶ್ರೀಮತಿ ಎ.ಪಿ.ಆರ್ ವಕೀಲರವರಿಂದಃ**

ಕೆಎ 20 ಇಪಿ 1119 ಅದರ ಮಾಲೀಕರು ನಾನೇ. ಸದ್ರಿ ವಾಹನ ಬೈಕ್ ಆಗಿರುತ್ತದೆ. ನನ್ನ ಬಳಿ ವಾಹನ ಚಾಲನಾ ಪರವಾನಿಗೆ ಇರುತ್ತದೆ. ನನ್ನ ವಾಹನದಲ್ಲಿ ಅಪಘಾತ ಸಮಯ ನಾನು ಒಬ್ಬನೇ ಇದ್ದೆ . ಸದ್ರಿ ಅಪಘಾತ ರಾತ್ರಿ 9.30 ಆಗಿರುತ್ತದೆ. ಸದ್ರಿ ಅಪಘಾತ ದಿವಸ ನಾನು ಹೆಲ್ಮೆಟ್ ಧರಿಸಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಶಿರ್ವದಿಂದ ಕಾಪುಗೆ ಹೋಗುತ್ತಾ ಇದ್ದೆ. ಸದ್ರಿ ರಸ್ತೆ ಸ್ವಲ್ಪ ಲೈಟ್ ಕರ್ವ್ ಇರುತ್ತದೆ. ಅಲ್ಲಿ ಒಂದು ದಾರಿ ದೀಪ ಇರುತ್ತದೆ. ನನ್ನ ಪ್ರಕಾರ ಪಲ್ಸರ್ ಬೈಕ್ ಕಾಪುವಿನಿಂದ ಶಿರ್ವ ರಸ್ತೆಯಲ್ಲಿ ಬಂದಿರುತ್ತದೆ.

ನನಗೆ ಎದುರಿನಿದ ಬರುತ್ತಿದ್ದ ವಾಹನಗಳು ಕಾಣುತ್ತಿತ್ತು. ಡಾಮರು ರಸ್ತೆ ಸುಮಾರು 12 ಫೀಟ್ ಇರುತ್ತದೆ. ಸದ್ರಿ ಅಪಘಾತ ಮುಖಾಮುಖಿ ಡಿಕ್ಕಿಯಿಂದ ಆಗಿರುತ್ತದೆ ಎಂದರೆ ಸರಿ. ಎರಡೂ ವಾಹನಗಳ ಮುಂದಿನ ಭಾಗ ಜಖಂ ಗೊಂಡಿರುತ್ತದೆ. ನನ್ನ ಭಾಲಭಾಗಕ್ಕೆ 4-5 ಫೀಟ್ ಡಾಮರ್ ರಸ್ತೆ ಇತ್ತು ಎಂದರೆ ಸಾಕ್ಷಿದಾರರು ಸ್ವಲ್ಪ ಜಾಸ್ತಿ ಇತ್ತು ಎಂದು ನುಡಿಯುತ್ತಾರೆ. ನನ್ನ ಮಾವ ವಿಶ್ವನಾಥ ರವರು ಪೊಲೀಸರಿಗೆ ಅಪಘಾತ ದಿವಸವೇ ದೂರು ಕೊಟ್ಟಿರುತ್ತಾರೆ. ಮರುದಿನ ನನ್ನ ಹೇಳಿಕೆ ಪೊಲೀಸರು ತೆಗೆದುಕೊಂಡಿರುತ್ತಾರೆ. ನನ್ನ ಗೆಳೆಯ ಸುಶಾಂತ್ ಶೆಟ್ಟಿ ಮತ್ತು ನನ್ನ ಮಾವನ ಹೇಳಿಕೆಗಳನ್ನು ಪೊಲೀಸರು ತೆಗೆದುಕೊಂಡಿರುತ್ತಾರೆ. ವಾಹನಗಳ ಸಂಚಾರ ಸದ್ರಿ ಕಡಿಮೆ ಇರುತ್ತದೆ. ನನ್ನ ಮಾವ ಅಪಘಾತ ಸಮಯದಲ್ಲಿ ರಸ್ತೆಯಲ್ಲಿ ಇರಲಿಲ್ಲ.

ಎಂ.ವಿ.ಸಿ.858/2023
ಪಿ .ಡಬ್ಲ್ಯೂ :    1

ಪೊಲೀಸರಿಗೆ ವಾಹನ ಮತ್ತು ಚಾಲಕನ ಹೆಸರು ಯಾರು ತಿಳಿಸಿದರು ಎಂದರೆ ಸಾಕ್ಷಿದಾರರು ನಾನೇ ಹೇಳಿರುತ್ತೇನೆ. ನಾನು ಬೈಕ್ ಬಿಡುಗಡೆಗೆ 30 ದಿವಸಗಳ ನಂತರ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಸುಶಾಂತ ಶೆಟ್ಟಿ ನನ್ನ ಗೆಳೆಯ ಮತ್ತು ಪ್ರವೀಣ ಆಚಾರ್ಯ ಪರಿಚಯ ಇರುತ್ತಾರೆ. ಸುಶಾಂತ ಶೆಟ್ಟಿ ಅಪಘಾತ ಸ್ಥಳದಲ್ಲಿ ಇದ್ದರು. ಪ್ರವೀಣ ಆಚಾರ್ಯ ಇರಲಿಲ್ಲ. ಅಪಘಾತ ಸ್ಥಳದಲ್ಲಿ ನಾನು ಮತ್ತು ಎದುರಿನ ವಾಹನ ಚಾಲಕ ಮಾತ್ರ ಇದ್ದೆವು.

ಸದ್ರಿ ಅಪಘಾತ ನನ್ನ ಅತೀ ವೇಗವಾಗಿ ವಾಹನ ನಡೆಸಿದ ಕಾರಣ ವಾಹನದ ಮೇಲೆ ನಿಯಂತ್ರಣ ತಪ್ಪಿ ಅಪಘಾತ ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ನಮೂದು ಮಾಡಿರುವ ವಾಹನ ಸದ್ರಿ ಅಪಘಾತದಲ್ಲಿ ಒಳಗೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಅರ್ಜಿಯಲ್ಲಿ ನಾನು ಹೇಳಿದಂತಹ ವಾಹನ ಇರಲೇ ಇಲ್ಲ ಕೇವಲ ಪರಿಹಾರ ಪಡೆಯುವುದಕ್ಕೋಸ್ಕರ ಸದ್ರಿ ವಾಹನವನ್ನು ನಾನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸ ರಿಗೆ ನಾನು ನನ್ನ ಅನುಕೂಲಕ್ಕೆ ತಕ್ಕಂತೆ ದಾಖಲೆಗಳನ್ನು ಬರೆಸಿ ಸೃಷಿಸಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಹೇಳಿದಂತೆ ಅಪಘಾತ ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆದರ್ಶ ಆಸ್ಪತ್ರೆಗೆ ಸದ್ರಿ ರಾತ್ರಿ ಹೋಗಿರುತ್ತೇನೆ. ದಿಃ 05-12-2022 ರಂದು ಸಂಜೆ 6.40 ಕ್ಕೆ ನಾನು ಆದರ್ಶ ಆಸ್ಪತ್ರೆಗೆ ಹೋಗಿರುತ್ತೇನೆ ಎಂದರೆ ಸಾಕ್ಷಿ ದಾರರು ಅಪಘಾತ ಆದ ದಿವಸ ನಾನು ಆಸ್ಪತ್ರೆಗೆ ಹೋಗಿರುತ್ತೇನೆ. ಸದ್ರಿ ವಿಷಯ ಸಾಬೀತು ಪಡಿಸಲು ನನ್ನ ಬಳಿ ದಾಖಲೆ ಇದೆ. ಆಸ್ಪತ್ರೆ ಯಲ್ಲಿ ನನಗೆ ವಿಚಾರಣೆ ಮಾಡಿರುತ್ತಾರೆ. ಡಿಸ್ಚಾರ್ಜ್ ಸಮ್ಮರಿಯಲ್ಲಿ ನಾನು ಒಳ ರೋಗಿಯಾಗಿ ಹಾಗೂ ಹೊರ ರೋಗಿಯಾ ಮತ್ತು ಚಿಕಿತ್ಸೆ ಪಡೆದಿರುವ ಎಲ್ಲಾ ಮಾಹಿತಿ ಸದ್ರಿ ದಾಖಲೆಯಲ್ಲಿ ದೊರೆಯುತ್ತದೆ ಎಂದರೆ ಸರಿ. ನನಗೆ ಚಿಕಿತ್ಸೆ ಕೊಟ್ಟಿದ್ದು ಡಾ. ಮೋಹನ್ ದಾಸ್ ಶೆಟ್ಟಿ.

ಅವರ ಹೇಳಿಕೆಯ ಮೇರೆಗೆ ನಾನು ಡಿಸ್ಚರ್ಜ್ ಆಗಿರುತ್ತೇನೆ ಎಂದರೆ ಸರಿ. ನನಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ ಆದರೆ ಕೈಗೆ ಫ್ರಾಕ್ಚರ್ ಆಗಿತ್ತು ಮತ್ತು ಕಾಲಿನ ಭಾಗದಲ್ಲಿ ತರಚಿದ ಗಾಯವಾಗಿತ್ತು. ಸದ್ರಿ ವಯರ್ ನನಗೆ ಒಂದು ತಿಂಗಳು ಆದ ನಂತರ ತೆಗೆದಿರುತ್ತಾರೆ.

ನಾನು ಆಸ್ಪತ್ಗೆ 12-01-2024 ರಲ್ಲಿ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಪಡೆಯಲು ಹೋಗಿರುತ್ತೇನೆ ಮತ್ತು ಅದಕ್ಕಿಂತ ಮುಂಚೆಯೂ ಸಹ ಹೋಗಿರುತ್ತೇನೆ. ಸದ್ರಿ ಅಂಗನ್ಯೂನತಾ ಪ್ರಮಾಣ ಪತ್ರ ವನ್ನು ನೀಡುವ ಸಮಯದಲ್ಲಿ ನನಗೆ ಚಿಕಿತ್ಸೆ ಪೂರ್ಣಗೊಂಡಿತ್ತು. ನನಗೆ ವೈದ್ಯರು ಈ ಅಂಗನ್ಯೂನತಾ ಪ್ರಮಾಣ ಪತ್ರ ಕೊಡುವ ಮುಂಚೆ ನನ್ನ ಕೆಲಸದ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಸದ್ರಿ ಅಂಗನ್ಯೂನತಾ ಪ್ರಮಾಣ ಪತ್ರ ದಲ್ಲಿ ಕೇವಲ ನನಗೆ ಭಾರದ ವಸ್ತುಗಳನ್ನು ಎತ್ತಬಾರದು ಎಂದು ಸಲಹೆ ನೀಡಿರುತ್ತಾರೆ. ಸದ್ರಿ ಅಂಗನ್ಯೂನತಾ ಪ್ರಮಾಣ ಪತ್ರ ನನಗೆ ಅನ್ವಯ ಆಗುವುದಿಲ್ಲ ನಾನು ಈ ಕೇಸಿಗೋಸ್ಕರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಅಂಗನ್ಯೂನತಾ ಪ್ರಮಾಣ ಪತ್ರದಲ್ಲಿ ನಮೂದಿಸಿದಷ್ಟು ಊನತ್ವ ಇಲ್ಲ ಹಾಗೂ ಅದರಲ್ಲಿ ನಮೂದಿಸಿದ ಗಾಯಕ್ಕೂ ನನಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ 9 ನನಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು 12 ನೇ ತರಗತಿವರೆಗೆ ಓದಿರುತ್ತೇನೆ ನಾನು ಹುಟ್ಟಿದ್ದ ದಿನಾಂಕ 18-09-1995. ಶ್ರೀರಾಮ್ ಫೈನಾನ್ಸ್ ನಲ್ಲಿ ನಾನು ಸುಮಾರು 3 ವರುಷ ಹಿಂದೆ ಜಾಯಿನ್ ಆಗಿರುತ್ತೇನೆ. ನಾನು ಬ್ಯುಸಿನೆಸ್ ಎಕ್ಸಿಕ್ಯುಟಿವ್ ಆಗಿ ಕೆಲಸ ಮಾಡುತ್ತೇನೆ. ನನಗೆ ನೇಮಕಾತಿ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿ.

ಎಂ.ವಿ.ಸಿ.858/2023
ಪಿ.ಡಬ್ಲ್ಯೂ: 1

ಸದ್ರಿ ಕಚೇರಿಯಲ್ಲಿ ಹಾಜರಾತಿ ದಾಖಲಾತಿ ಲಭ್ಯವಿರುತ್ತದೆ. ನನ್ನ ವೇತನ ನನ್ನ ಸ್ಯಾಲರಿ ಖಾತೆಗೆ ಜಮಾ ಆಗುತ್ತದೆ. ನಾನು ರಾಜಿನಾಮೆ ಕೊಟ್ಟು 3 ತಿಂಗಳು ಆಗಿರುತ್ತದೆ. ನಿಪಿ 11 ನಾನು ಕೆಲಸ ಮಾಡುತ್ತಿದ್ದ ಕಂಪನಿಗೆ ನೀಡಿದ್ದೆ. ನಾನು ಚಿಕಿತ್ಸೆ ಪಡೆಯುವ ಸಮಯ ನನಗೆ ಸ್ಯಾಲರಿ ಬರುತ್ತಿರಲಿಲ್ಲ. 30 ದಿನಗಳ ರಜೆ ತೆಗೆದುಕೊಂಡ ನಂತರ ನಾನು ಕೆಲಸ ಮಾಡಲು ಕಷ್ಟವಾಗುತ್ತಿತ್ತು. ಇದಕ್ಕೆ ಸಂಬಂದಿಸಿ ಶ್ರೀರಾಮ ಫೈನಾನ್ಸ್ ರವರು ಯಾವುದೇ ದಾಖಲೆ ಕೊಟ್ಟಿಲ್ಲ. ಅದ್ರಿ ಅಂಗನ್ಯೂನತಾ ಪ್ರಮಾಣ ಪತ್ರ ವನ್ನು ನಾನು ಶ್ರೀರಾಮ್ ಫೈನಾನ್ಸ್ ನಾನು ನೀಡಿಲ್ಲ. ನನಗೆ ಅಪಘಾತ ಪೂರ್ವದಲ್ಲಿ 15,800/- ಇತ್ತು . ಈಗ ನಾನು ಮನೆಯಲ್ಲಿ ಇದ್ದೇನೆ. ನಾನು ಮುಖ್ಯ ವಿಚಾರಣೆಯಲ್ಲಿ ಖರ್ಚುಗಳ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ ಮತ್ತು ಮುಖ್ಯ ವಿಚಾರಣೆಯಲ್ಲಿ ನಮೂದುದು ಮಾಡಿರುವ ಎಲ್ಲಾ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿರುವ 30,284/- ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ 2 ನೇ ಎದ್ರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಂ.ಎ.ಸಿ.ಟಿ. ಉಡುಪಿ.